KAVP210001322016

Presented on : 08-03-2016
Registered on : 08-03-2016
Decided on : 12-06-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ .**

**-:ಉಪಸ್ಥಿತರು:-**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ

**ಸಿ.ಸಿ. ನಂ.145/2016**

ದಿನಾಂಕ: **12** ನೇ ಜೂನ , **2026**

ಫಿರ್ಯಾದಿ: ರಾಜ್ಯದ ಪರವಾಗಿ ಪೊಲೀಸ್ ಇನ್ಸ್ ಪೆಕ್ಟರ್,
ನಿಡಗುಂದಿ ಪೊಲೀಸ್ ಠಾಣೆ.

(ಪ್ರತಿನಿಧಿಸುವವರು: ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ದ-

ಆರೋಪಿತರು:-

1. ಸುನೀಲ ತಂದೆ ವಿಠ್ಠಲ ಹಳ್ಳಿ
ವಯಾ: 38, ಸಾ: ಹಳಗುಣಕಿ, ತಾ: ಇಂಡಿ
ಹಾ:ವ: ಬಾಂಬೆ ಚೆಂಬೂರದ ಹತ್ತಿರ ಲಾಡ್ ಡೊಂಗರ

2. ಸೀತವ್ವ ಗಂಡ ವಿಠ್ಠಲ ಹಳ್ಳಿ
ವಯಾ: 56, ಸಾ: ಹಳಗುಣಕಿ, ತಾ: ಇಂಡಿ
ಹಾ:ವ: ಬಾಂಬೆ ಚೆಂಬೂರದ ಹತ್ತಿರ ಲಾಡ್ ಡೊಂಗರ

3. ರೇಣುಕಾ ಗಂಡ ಬಸವರಾಜ ನಾಗನಸೂರ @ ಕೆಳಗೇರಿ
ವಯಾ: 41, ಸಾ: ಹಳಗುಣಕಿ, ತಾ: ಇಂಡಿ
ಹಾ:ವ: ಬಾಂಬೆ ಚೆಂಬೂರದ ಹತ್ತಿರ ಲಾಡ್ ಡೊಂಗರ

4. ಶರಣಪ್ಪ ತಂದೆ ಮರೆಪ್ಪ ಕಕ್ಕಳಮೇಲಿ
ವಯಾ: 53, ಸಾ: ಹಳಗುಣಕಿ, ತಾ: ಇಂಡಿ
ಹಾ:ವ: ಬಾಂಬೆ ಚೆಂಬೂರದ ಹತ್ತಿರ ಲಾಡ್ ಡೊಂಗರ
{ಮೃತಪಟ್ಟಿರುತ್ತಾರೆ. }

5. ರಮೇಶ ತಂದೆ ಮರೆಪ್ಪ ಕಕ್ಕಳಮೇಲಿ
ವಯಾ: 56, ಸಾ: ಹಳಗುಣಕ, ತಾ: ಇಂಡಿ
ಹಾ:ವ: ಬಾಂಬೆ ಚೆಂಬೂರದ ಹತ್ತಿರ ಲಾಡ್ ಡೊಂಗರ

(ಪ್ರತಿನಿಧಿಸುವವರು:ಶ್ರೀ ಬಿ.ಎಸ್.ಕೆ ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 12.06.2015 |
| 2 | ಅಪರಾಧ ವರದಿಯಾದ ದಿನಾಂಕ | 14-06-2015 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | 26-06-2015 |
| 4 | ಫಿರ್ಯಾದಿಯ ಹೆಸರು | ಶೋಬಾ ಗಂಡ ಸುನೀಲ ಹಳ್ಳಿ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 29-10-2025 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 05-06-2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ . 498-ಎ , 504 ಹಾಗೂ 506 ಸಹ ಕಲಂ 149 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿಗಳು |

**-ತೀ ರ್ಪು-**

ಆರೋಪಿತರ ವಿರುದ್ಧ ನಿಡಗುಂದಿ ಪೋಲಿಸ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ ಆರೋಪಿತರು ಭಾ.ದಂ.ಸಂ.ಕಲಂ.498(ಎ), 504 ಹಾಗೂ 506 ಸಹವಾಚಕ ಕಲಂ.149 ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

1 ನೇ ಆರೋಪಿ ಚಾಸಾ-1 ರವರ ಗಂಡ ಹಾಗೂ ಇತರ ಆರೋಪಿತರು ಚಾಸಾ1 ರವರ ಅತ್ತೆ, ನಾದಿನಿ ಹಾಗೂ 1 ನೇ ಆರೋಪಿಯ ಮಾವಂದಿರು ಇದ್ದು, ಆರೋಪಿತರೆಲ್ಲರೂ ಚಾಸಾ-1 ರವರಿಗೆ ನೀನು ಸರಿಯಿಲ್ಲ ನಿನ್ನ ತವರು ಮನೆಗೆ ಹೋಗು 1 ನೇ ಆರೋಪಿಗೆ

2 ನೇ ಮದುವೆ ಮಾಡುತ್ತೇವೆ ಇಲ್ಲವಾದರೆ ನಿನ್ನ ತವರು ಮನೆಯಿಂದ ಹಣ-ಬಂಗಾರ ತೆಗೆದುಕೊಂಡು ಬಾ ಎಂದು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದು, ದಿ: 12-06-2015 ಸಂಜೆ 5-00 ಗಂಟೆಗೆ 1 ನೇ ಆರೋಪಿತನು ಚಾಸಾ-1 ರವರ ತಂದೆ ಮನೆ ಮುಂದೆ ಬಂದು ಚಾಸಾ1 ರವರೊಂದಿಗೆ ವಿನಾಕಾರಣ ಜಗಳ ತೆಗೆದು ವಿವಾಹ ವಿಚ್ಛೇದನೆ ಕೊಡು ಇಲ್ಲವಾದರೆ ನಿನಗೆ ಬಿಡುವುದಿಲ್ಲ ಖಲಾಸ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಆದಕಾರಣ ಆರೋಪಿತರು ಮೇಲ್ಕಾಣಿಸಿದ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಲಾಗಿದೆ.

3. ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.ಈ ಪ್ರಕರಣವು ಚಾಲ್ತಿಯಲ್ಲಿರುವಾಗ 4 ನೇ ಆರೋಪಿಯು ಮೃತಪಟ್ಟಿರುತ್ತಾರೆ.

4. ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು 07 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರಲ್ಲಿ ಪ್ರಾಸಾ.1 ರಿಂದ 5 ಎಂದು ವಿಚಾರಣೆ ಮಾಡಿ ಹಾಗೂ ನಿಪಿ.1 ರಿಂದ 5 ರವರೆಗೆ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿತರು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದರೂ ಸಹ ತಮ್ಮ ಪರವಾಗಿ ಯಾವುದೇ ರಕ್ಷಣಾತ್ಮಕ

ಸಾಕ್ಷಿಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ. ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

6. ಉಭಯ ಪಕ್ಷಗಾರರ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

<u>ಅಂ ಶ ಗ ಳು</u>

1. ಆರೋಪಿತರೆಲ್ಲರೂ ಎಕೋದ್ದೇಶದಿಂದ ಚಾಸಾ-1 ರವರಿಗೆ ನೀನು ಸರಿಯಿಲ್ಲ ನಿನ್ನ ತವರು ಮನೆಗೆ ಹೋಗು 1 ನೇ ಆರೋಪಿಗೆ 2 ನೇ ಮದುವೆ ಮಾಡುತ್ತೇವೆ ಇಲ್ಲವಾದರೆ ನಿನ್ನ ತವರು ಮನೆಯಿಂದ ಹಣ-ಬಂಗಾರ ತೆಗೆದುಕೊಂಡು ಬಾ ಎಂದು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ. ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.498(ಎ) ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

2. ದಿ: 12-06-2015 ಸಂಜೆ 5-00 ಗಂಟೆಗೆ 1 ನೇ ಆರೋಪಿತನು ಚಾಸಾ-1 ರವರ ತಂದೆ ಮನೆ ಮುಂದೆ ಬಂದು ಚಾಸಾ1 ರವರೊಂದಿಗೆ ವಿನಾಕಾರಣ ಜಗಳ ತೆಗೆದು ವಿವಾಹ ವಿಚ್ಛೇದನೆ ಕೊಡು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

3. ಅದೇ ರೀತಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತನು ಚಾಸಾ1 ರವರೊಂದಿಗೆ ವಿನಾಕಾರಣ ಜಗಳ ತೆಗೆದು ವಿವಾಹ ವಿಚ್ಛೇದನೆ ಕೊಡು ಇಲ್ಲವಾದರೆ ನಿನಗೆ ಬಿಡುವುದಿಲ್ಲ ಖಲಾಸ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾ ರೆಯೇ?

4. ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ:-

ಅಂಶ-1ಃ ನಕಾರಾತ್ಮಕವಾಗಿ,

ಅಂಶ-2ಃ ನಕಾರಾತ್ಮಕವಾಗಿ,

ಅಂಶ-3ಃ ನಕಾರಾತ್ಮಕವಾಗಿ,

ಅಂಶ-4ಃ ಅಂತಿಮ ಆದೇಶದಂತೆ:

-ಃ ಕಾ ರ ಣ ಗ ಳು ಃ-

**9**. ಅಂಶ ಸಂಖ್ಯೆ **1** ರಿಂದ **3** ಃ ಈ ಮೂರು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಮೂರು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

10. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ.1 ರವರನ್ನು ಪ್ರಾಸಾ.5 ಎಂದು ಸಾಕ್ಷ್ಯ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-4 ತನ್ನ ತಂದೆ. ಚಾಸಾ-5 ತನ್ನ ತಮ್ಮ. ಚಾಸಾ-6 ತನಗೆ ಗೊತ್ತು. 1 ನೇ ಆರೋಪಿ ತನ್ನ ಗಂಡ. 2 ನೇ ಆರೋಪಿ ತನ್ನ ಅತ್ತೆ. 3 ರಿಂದ 5 ನೇ ಆರೋಪಿತರು ತನ್ನ ಸಂಬಂಧಿಕರು. ಆರೋಪಿತರು ತನಗೆ ವರದಕ್ಷಣೆ ಹಣವನ್ನು ತರುವಂತೆ ಯಾವುದೇ ರೀತಿಯ ಕಿರುಕುಳವನ್ನು ನೀಡಿರುವುದಿಲ್ಲ, ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಈ ಕುರಿತು ತಾನು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

11. ಈ ಪ್ರಕರಣದ ಸ್ಥಳ ಮಹಜರ್ ಸಾಕ್ಷಿದಾರರಾದ ಚಾಸಾ.2 ರವರನ್ನು ಪ್ರಾ.ಸಾ.1 ಎಂದು ಮತ್ತು ಚಾಸಾ-3 ರವರನ್ನು ಪ್ರಾಸಾ-2 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚಾಸಾ-1 ರವರ ಪರಿಚಯ ಇರುವುದಿಲ್ಲ. ಚಾಸಾ-2 ಮತ್ತು 4 ರವರ ಪರಿಚಯ ಇರುತ್ತದೆ. ನಿಪಿ-1 ಸ್ಥಳ ಮಹಜರ ಮೇಲಿರುವ ತಮ್ಮ

ಹೆಬ್ಬೆಟ್ಟಿನ ಗುರುತನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು, ಆದರೆ ತಮ್ಮ ಸಮಕ್ಷಮದಲ್ಲಿ ಪೋಲಿಸರು ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಿಪಿ-1 ರಲ್ಲಿ ಬರೆದಿರುವ ಅಂಶಗಳು ತಮಗೆ ಗೊತ್ತಿರುವುದಿಲ್ಲ. ತಾವು ಸುಮಾರು 10 ವರ್ಷಗಳ ಹಿಂದೆ ನಿಡಗುಂದಿ ಪೋಲಿಸ ಠಾಣೆಗೆ ಹೋದಾಗ ನಿಪಿ-1 ಕ್ಕೆ ಸಹಿ ಮಾಡಿರುತ್ತೇವೆ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

12. ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.6 ರವರನ್ನು ಪ್ರಾ.ಸಾ.3 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1, 4 ಮತ್ತು 5 ರವರ ಪರಿಚಯ ಇರುತ್ತದೆ ಮತ್ತು ಆರೋಪಿತರು ಪರಿಚಯ ಇರುತ್ತಾರೆ. ದಿ: 12.06.2015 ರಂದು ಸಂಜೆ 05.00 ಗಂಟೆಗೆ ಆರೋಪಿತರು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಯಾವ ವಿಚಾರಕ್ಕಾಗಿ ಆರೋಪಿತರು ಚಾಸಾ-1 ರವರಿಗೆ ಹೊಡೆದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ. ತಾನು ಪೋಲಿಸರು ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತರಲು ಸಾಧ್ಯವಾಗಿರುವುದಿಲ್ಲ.

13. ಈ ಪ್ರಕರಣದ ತನಿಖಾಧಿಕಾರಿಯಾದ ಚಾ.ಸಾ.7 ರವರನ್ನು ಪ್ರಾ.ಸಾ.4 ಎಂದು ಸಾಕ್ಷ್ಯ ಮಾಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 14.06.2015 ರಂದು ಮಧ್ಯಾಹ್ನ 01.15 ಗಂಟೆಗೆ ತಾನು ಠಾಣಾ ಎಸ್.ಎಚ್.ಒ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿರುವ ಲಿಖಿತ ದೂರನ್ನು ಸ್ವೀಕರಿಸಿ ತಮ್ಮ ಠಾಣಾ ಗುನ್ನೆ ನಂಬರ್ 106/2015 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ. ಅದೇ ದಿನ ತಾನು

ಮಧ್ಯಾಹ್ನ 02.30 ಗಂಟೆಯಿಂದ 03.30 ಗಂಟೆಯವರೆಗೆ ಚಾಸಾ-4 ರವರು ತೋರಿಸಿದಂತೆ ನಿಡಗುಂದಿಯ ಗ್ರಾಮದ ಚಾಸಾ-1 ರವರ ಮನೆಯ ಮುಂದೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿ, ಮಹಜರ ಕಾಲದಲ್ಲಿ ಛಾಯಾಚಿತ್ರವನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ 4 ರಿಂದ 6 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ದಿ: 26.06.2015 ರಂದು ಆರೋಪಿತರು ತನ್ನ ಮುಂದೆ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನಿನ ಆದೇಶ ಪ್ರತಿಯನ್ನು ತಂದು ಹಾಜರುಪಡಿಸಿದ್ದು, ತಾನು ಆರೋಪಿತರ ವಿರುದ್ದ ದಸ್ತಗಿರಿ ಕ್ರಮಗಳನ್ನು ಅನುಸರಿಸಿ ಆರೋಪಿತರಿಂದ ಸೂಕ್ತ ಭದ್ರತೆಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

14. ಅಭಿಯೋಜನೆಯ ಪರವಾಗಿ ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಕೆಳಕಂಡಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ:-

ನಿ.ಪಿ.1 ರಂತೆ ಸ್ಥಳ ಮಹಜರನ್ನು, ನಿಪಿ-2 ರಂತೆ ಛಾಯಾ ಚಿತ್ರವನ್ನು, ನಿಪಿ-3 ರಂತೆ ಪ್ರಾ.ಸಾ-3 ರವರು ಅಲ್ಲಗಳೆದ ಹೇಳಿಕೆಯ ಭಾಗವನ್ನು, ನಿಪಿ-4 ರಂತೆ ದೂರನ್ನು ಹಾಗೂ ನಿಪಿ-5 ರಂತೆ ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿರುತ್ತಾರೆ.

15. ಈ ಮೇಲ್ಕಂಡ ಅಭಿಯೋಜನೆಯ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಆರೋಪಿತರ ವಿರುದ್ಧ ಫಿರ್ಯಾದಿ ಸಲ್ಲಿಸಿದ್ದು , 1 ನೇ ಆರೋಪಿ ಚಾಸಾ-1 ರವರ ಗಂಡ ಹಾಗೂ ಇತರ ಆರೋಪಿತರು ಚಾಸಾ1 ರವರ ಅತ್ತೆ, ನಾದಿನಿ ಹಾಗೂ 1 ನೇ ಆರೋಪಿಯ ಮಾವಂದಿರು ಇದ್ದು, ಆರೋಪಿತರೆಲ್ಲರೂ

ಚಾಸಾ-1 ರವರಿಗೆ ನೀನು ಸರಿಯಿಲ್ಲ ನಿನ್ನ ತವರು ಮನೆಗೆ ಹೋಗು 1 ನೇ ಆರೋಪಿಗೆ 2 ನೇ ಮದುವೆ ಮಾಡುತ್ತೇವೆ ಇಲ್ಲವಾದರೆ ನಿನ್ನ ತವರು ಮನೆಯಿಂದ ಹಣ-ಬಂಗಾರ ತೆಗೆದುಕೊಂಡು ಬಾ ಎಂದು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದು, ದಿ: 12-06-2015 ಸಂಜೆ 5-00 ಗಂಟೆಗೆ 1 ನೇ ಆರೋಪಿತನು ಚಾಸಾ-1 ರವರ ತಂದೆ ಮನೆ ಮುಂದೆ ಬಂದು ಚಾಸಾ1 ರವರೊಂದಿಗೆ ವಿನಾಕಾರಣ ಜಗಳ ತೆಗೆದು ವಿವಾಹ ವಿಚ್ಛೇದನೆ ಕೊಡು ಇಲ್ಲವಾದರೆ ನಿನಗೆ ಬಿಡುವುದಿಲ್ಲ ಖಲಾಸ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಆರೋಪಿಸಲಾಗಿರುತ್ತದೆ.

16. ಕ್ರಿಮಿನಲ್ ಪ್ರಕರಣಗಳಲ್ಲಿನ ರುಜುವಾತಿನ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ. ಸದರಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳ ಕುರಿತು ಸಂಶಯಾತೀತವಾಗಿ ರುಜುವಾತು ಪಡಿಸಬೇಕಾಗುತ್ತದೆ. ಈ ಕುರಿತು ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿರುವ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

17. ಪ್ರಾ.ಸಾ.5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ತನಗೆ ವರದಕ್ಷಿಣೆ ಹಣವನ್ನು ತರುವಂತೆ ಯಾವುದೇ ಕಿರುಕುಳವನ್ನು ನೀಡಿರುವುದಿಲ್ಲ, ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ತನಗೆ ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ ಮತ್ತು ಈ ಕುರಿತು ತಾನು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದೇ ರೀತಿಯಾಗಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ-3 ರವರು ಸಹ ತಮ್ಮ ಸಾಕ್ಷ್ಯದಲ್ಲಿ ದಿ:12-06-2015 ರಂದು ಸಂಜೆ 5-00 ಗಂಟೆಗೆ ಆರೋಪಿತರು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಯಾವ ವಿಚಾರಕ್ಕೆ ಆರೋಪಿತರು ಚಾಸಾ-1 ರವರಿಗೆ ಹೊಡೆದಿರುತ್ತಾರೆ ತನಗೆ ಗೊತ್ತಿಲ್ಲ ಮತ್ತು ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಈ ಕುರಿತು ನಿಶಾನೆ ಪಿ.1 ರಂತೆ ದೂರನ್ನು ಸಹ ಪೋಲೀಸ್ ಠಾಣೆಗೆ ನೀಡಿರುತ್ತಾರೆ. ನಿಶಾನೆ ಪಿ.1 ದೂರಿನಲ್ಲಿ ಚಾ.ಸಾ.1 ರವರು ಆರೋಪಿತರೊಂದಿಗೆ ಆರೋಪಿತರ

ಮನೆಯಲ್ಲಿದ್ದಾಗ ಆರೋಪಿತರುಗಳು ತನಗೆ ಹಣ ಮತ್ತು ಬಂಗಾರವನ್ನು ತವರು ಮನೆಯಿಂದ ತರಬೇಕೆಂದು ಹೇಳಿ ತನಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿರುತ್ತಾರೆ. ಅದೇ ರೀತಿಯಾಗಿ ದಿ: 12-06-2015 ರಂದು ಸಂಜೆ 5-00 ಗಂಟೆ ಸುಮಾರಿಗೆ ತಾನು ತನ್ನ ತವರು ಮನೆಯಲ್ಲಿದ್ದಾಗ 1 ನೇ ಆರೋಪಿ ಅಲ್ಲಿಗೆ ಬಂದು ಚಾಸಾ-1 ರವರೊಂದಿಗೆ ಜಗಳ ತೆಗೆದು ತನಗೆ ಬಾಯಿಗೆ ಬಂದಂತೆ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ನಮೂದಿಸಿರುತ್ತಾರೆ.

19. ನಿಶಾನೆ ಪಿ.1 ಮತ್ತು ಪ್ರಾ.ಸಾ.3 ಮತ್ತು 5 ರವರ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ-1 ರ ದೂರನಲ್ಲಿರುವ ಅಂಶಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುತ್ತದೆ. ಅದೇ ರೀತಿಯಾಗಿ ಪ್ರಾಸಾ-3 ರವರು ಸಹ ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಚಾಸಾ-1 ರವರಿಗೆ ಬಂಗಾರ ಮತ್ತು ಹಣ ತರುವಂತೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ನೀಡಿರುವ ಕುರಿತು, ಆರೋಪಿತರು ಚಾಸಾ-1 ರವರೊಂದಿಗೆ ಗಲಾಟೆ ಮಾಡಿರುವ ಕುರಿತು, ಅವಾಚ್ಯ ಶಬ್ದಗಳಿಂದ ಬೈದಿರುವ ಕುರಿತು ಮತ್ತು ಪ್ರಾಣ ಬೆದರಿಕೆಯನ್ನು ಹಾಕಿರುವ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಪ್ರಾಸಾ- 3 ಮತ್ತು 5 ರವರು ತಮ್ಮ ಸಾಕ್ಷ್ಯಗಳಲ್ಲಿ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜನೆ ಪ್ರಕರಣದ ಕುರಿತು ನ್ಯಾಯಾಲಯಕ್ಕೆ ಸಂಶಯವನ್ನುಂಟು ಮಾಡುತ್ತದೆ. ಹಾಗಾಗಿ ಆರೋಪಿತರು ಪ್ರಾ.ಸಾ.5 ರವರಿಗೆ ವರದಕ್ಷಣೆಗಾಗಿ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳವನ್ನು ನೀಡಿರುವುದರ ಕುರಿತು ಮತ್ತು ದಿ: 12-06-2015 ರಂದು ಸಂಜೆ 5-00 ಗಂಟೆಗೆ 1 ನೇ ಆರೋಪಿಯು ಚಾಸಾ-1 ರರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುವ ಕುರಿತು ಮತ್ತು ಪ್ರಾಣ ಬೆದರಿಕೆ ಹಾಕಿರುವ ಕುರಿತು ಸಂಶಯವನ್ನುಂಟು ಮಾಡುತ್ತದೆ.

**20.** ಈ ಕುರಿತು ಭಾರತೀಯ ದಂಡ ಸಂಹಿತೆಯ ಕಲಂ **498(ಎ)** ನ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಯು ಈ ಕೆಳಗಿನಂತೆ ಇರುತ್ತದೆ.

**498(ಎ).**ಮಹಿಳೆಯ ಗಂಡ ಅಥವಾ ಆತನ ಸಂಬಂಧಿಗಳು ಆಕೆಯ ಕ್ರೌರ್ಯಕ್ಕೊಳಪಡಿಸುವುದು:-

ಮಹಿಳೆಯ ಪತಿ ಅಥವಾ ಸಂಬಂಧಿಯಾದ ಯಾವನೇ ವ್ಯಕ್ತಿಯು ಅಂಥ ಮಹಿಳೆಯನ್ನು ಕ್ರೌರ್ಯಕ್ಕೊಳಪಡಿಸಿದರೆ ಅಂಥ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸದಿಂದ ದಂಡಿತನಾಗತಕ್ಕುದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕುದು.

ಭಾರತೀಯ ದಂಡ ಸಂಹಿತೆಯ ಕಲಂ **498(**ಎ**)** ನ ಮುಖ್ಯ ಅಂಶಗಳನ್ನು ಪರಿಶೀಲಿಸಿದಾಗ, ಯಾವುದೇ ಸ್ವತ್ತಿಗಾಗಿ ಅಥವಾ ಮೌಲಿಕ ಭದ್ರತೆಗಾಗಿ ಕಾನೂನು ಸಮ್ಮತವಲ್ಲದ ಮಾಗಣಿಯನ್ನು**(**ಡಿಮಾಂಡ್**)** ನ್ನು ಪೂರೈಸಲು ಆಕೆಯನ್ನು ಅಥವಾ ಆಕೆಗೆ ಸಂಬಂಧಿಸಿದ ವ್ಯಕ್ತಿಯನ್ನು ಒತ್ತಾಯಿಸುವ ಉದ್ದೇಶದಿಂದ ಅಥವಾ ಅಂತಹ ಮಾಗಣಿಯನ್ನು ಪೂರೈಸಲು ಆಕೆ ಮತ್ತು ಆಕೆಗೆ ಸಂಬಂಧಿಸಿದ ಯಾವುದೇ ವ್ಯಕ್ತಿಯು ವಿಫಲನಾದ ಕಾರಣ ಆ ಮಹಿಳೆಗೆ ಕೊಡಲಾದ ಉಪದ್ರವ.

**21.** ಈ ಕುರಿತು ಈ ನ್ಯಾಯಾಲಯವು ಈ ಕೆಳಗಿನ ತೀರ್ಪುಜನ್ಯವನ್ನು ಉಲ್ಲೇಖಿಸುತ್ತದೆ.

**1) 2025(1) KCCR SN 23(SC)**
**Yashodeep Bisanrao Vadode Vs. State of Maharashtra and another**

**A. PENAL CODE, 1860-BHARATIYA NYAYA SAMHITA, 2023-Section 498A-Essential ingredients-Discussed-A bare perusal of Section 498-A would reveal that the following as the essential ingredient to attract the said offence: (a) The victim was a married lady (may also be a widow), (b) That she has been subjected to cruelty by her husband or relative(s) of her husband (That such cruelty consisted of either (1) harassment with a view to coerce meeting a demand for dowry, or (1) a wilful contact by the husband or his relative of such a nature as is likely to lead the lady to commit suicide or to cause grave injury to her life, limb or health. (d) That such injury as aforesaid may be physical or mental.**

22. ಈ ಮೇಲಿನ ಕಾನೂನಿನ ಪರಿಕಲ್ಪನೆವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಯಾವುದೇ ಸ್ವತ್ತಿಗಾಗಿ ಅಥವಾ ಮೌಲಿಕ ಭದ್ರತೆಗಾಗಿ ಕಾನೂನು ಸಮ್ಮತವಲ್ಲದ ಮಾಗಣಿಯನ್ನು(ಡಿಮಾಂಡ್) ನ್ನು ಪೂರೈಸಲು ಆಕೆಯನ್ನು ಅಥವಾ ಆಕೆಗೆ ಸಂಬಂಧಿಸಿದ ವ್ಯಕ್ತಿಯನ್ನು ಒತ್ತಾಯಿಸುವ ಉದ್ದೇಶದಿಂದ ಅಥವಾ ಅಂತಹ ಮಾಗಣಿಯನ್ನು ಪೂರೈಸಲು ಆಕೆ ಮತ್ತು ಆಕೆಗೆ ಸಂಬಂಧಿಸಿದ ಯಾವುದೇ ವ್ಯಕ್ತಿಯು ವಿಫಲನಾದ ಕಾರಣ ಆ ಮಹಿಳೆಗೆ ಕಿರುಕುಳವನ್ನು ನೀಡುವುದು ಅತ್ಯವಶ್ಯಕವಾಗಿರುತ್ತದೆ.

23. ಈ ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ.5 ರವರಿಗೆ ಆರೋಪಿತರು ಯಾವುದೇ ಕಾನೂನು ಸಮ್ಮತವಲ್ಲದ ಮಾಗಣಿಯನ್ನು ಪೂರೈಸುವುದಕ್ಕಾಗಿ ಪ್ರಾ.ಸಾ.5 ರವರಿಗೆ ಕ್ರೌರ್ಯಕ್ಕೆ ಒಳಪಡಿಸಿರುತ್ತಾರೆ ಎಂಬುದರ ಬಗ್ಗೆ ಪ್ರಾ.ಸಾ.3 ಹಾಗೂ ಪ್ರಾಸಾ-5 ರವರುಗಳು ಮೌಖಿಕ ಸಾಕ್ಷ್ಯಗಳಲ್ಲಿ ಮತ್ತು ನಿಶಾನೆ ಪಿ.1 ದೂರಿನಲ್ಲಾಗಲೀ ನಿರ್ಧಿಷ್ಟವಾಗಿ ಹೇಳಿರುವುದಿಲ್ಲ. ಹಾಗಾಗಿ ಆರೋಪಿತರು ಪ್ರಾ.ಸಾ.5 ರವರಿಗೆ ಮಾನಸಿಕ ಮತ್ತು ದೈಹಿಕ ಕ್ರೌರ್ಯಕ್ಕೆ ಒಳಪಡಿಸಿರುತ್ತಾರೆ ಎಂಬುದರ ಬಗ್ಗೆ ಯಾವುದೇ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಅಭಿಯೋಜನೆಯವರು ಹಾಜರುಪಡಿಸಿರುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

24. ಈ ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-4 ರವರು ದಿನಾಂಕ 14-06-2015 ರಂದು ಮಧ್ಯಾಹ್ನ 2-30 ರಿಂದ 3-30 ಗಂಟೆಯವರೆಗೆ ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಚಾ.ಸಾ.2 ಮತ್ತು 3 ರವರ ಸಮಕ್ಷಮದಲ್ಲಿ ಚಾ.ಸಾ.1 ಮತ್ತು ಆರೋಪಿತರ ನಡುವೆ ಆದ ಗಲಾಟೆಗೆ ಸಂಬಂಧಿಸಿದಂತೆ ಚಾಸಾ-1 ರವರ ತವರು ಮನೆಯಲ್ಲಿ ನಿಶಾನೆ ಪಿ.1 ರಂತೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಕುರಿತು ಅಭಿಯೋಜನೆಯವರು ನಿಪಿ-1 ರಂತೆ ಸ್ಥಳ ಮಹಜರನ್ನು ಹಾಜರುಪಡಿಸಿರುತ್ತಾರೆ. ಈ ಕುರಿತು ಚಾಸಾ-4 ರವರು ಮೃತಪಟ್ಟಿರುವುದರಿಂದ ಅವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

25. ಅದೇ ರೀತಿಯಾಗಿ ಮಹಜರ್ ಕ್ರಮ ಜರುಗಿಸುವ ಸಮಯದಲ್ಲಿ ಹಾಜರು ಇದ್ದ ಪ್ರಾಸಾ-1 ಮತ್ತು 2 ರವರು ತಮ್ಮ ಸಾಕ್ಷ್ಯಗಳಲ್ಲಿ ನಿಪಿ-1 ರ ಮಹಜರನಲ್ಲಿರುವ ತಮ್ಮ

ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಆದರೆ ತಮ್ಮ ಸಮಕ್ಷಮದಲ್ಲಿ ಪೋಲಿಸರು ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಿಪಿ-1 ರಲ್ಲಿ ಬರೆದಿರುವ ಅಂಶಗಳು ತಮಗೆ ಗೊತ್ತಿರುವುದಿಲ್ಲ ಮತ್ತು ತಾವು ಸುಮಾರು 10 ವರ್ಷಗಳ ಹಿಂದೆ ನಿಡಗುಂದಿ ಪೋಲಿಸ ಠಾಣೆಗೆ ಹೋದಾಗ ನಿಪಿ-1 ಕ್ಕೆ ಸಹಿ ಮಾಡಿರುತ್ತೇವೆ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

26. ಈ ಮೇಲಿನ ಪ್ರಾ.ಸಾ.1 , 2 ಮತ್ತು 4 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಪ್ರಾಸಾ-1 ಮತ್ತು 2 ರವರು ತಮ್ಮ ಸಾಕ್ಷ್ಯಗಳಲ್ಲಿ ಪ್ರಾಸಾ-4 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೇ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುತ್ತದೆ. ಪ್ರಾಸಾ-4 ರವರು ಪೋಲಿಸ ಇಲಾಖೆಯ ಅಧಿಕಾರಿಯಾಗಿರುವುದರಿಂದ, ಪ್ರಾಸಾ-4 ರವರು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುವುದು ಕಂಡು ಬರುತ್ತದೆ. ಹಾಗಾಗಿ ಪ್ರಾಸಾ-4 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ ಸಾಕ್ಷಿದಾರರ ಸಮರ್ಥನೆ ಇಲ್ಲದೇ ಪ್ರಾಸಾ-4 ರವರ ಸಾಕ್ಷ್ಯ ಕುರಿತು ಸಂಶಯವನ್ನುಂಟು ಮಾಡುತ್ತದೆ. ಆದ್ದರಿಂದ ಪ್ರಾಸಾ-4 ರವರು ಚಾ.ಸಾ.2 ಮತ್ತು 3 ರವರ ಸಮಕ್ಷಮದಲ್ಲಿ ಚಾ.ಸಾ.4 ರವರು ತೋರಿಸಿದ ಸ್ಥಳದಲ್ಲಿ ನಿಶಾನೆ ಪಿ.1 ರಂತೆ ಮಹಜರ್ ಕ್ರಮ ಜರುಗಿಸಿದ ಬಗ್ಗೆ ನ್ಯಾಯಾಲಯಕ್ಕೆ ಸಂಶಯವನ್ನು ಉಂಟುಮಾಡುತ್ತದೆ.

27. ಈ ಮೇಲಿನ ವಿಸ್ತೃತ ಚರ್ಚೆಯಿಂದಾಗಿ ಆರೋಪಿತರುಗಳು ಪ್ರಾ.ಸಾ.5 ರವರಿಗೆ ಬಂಗಾರ ಮತ್ತು ಹಣವನ್ನು ತರುವಂತೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ನೀಡಿದ ಬಗ್ಗೆ ಮತ್ತು 1 ನೇ ಆರೋಪಿಯು ಪ್ರಾಸಾ-5 ರವರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಪ್ರಭಲವಾದ ಮತ್ತು ಸೂಕ್ತವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯದಿಂದ ಆರೋಪಿತರ ವಿರುದ್ಧದ ಆರೋಪಣೆಯ ಕುರಿತು ಸಂಶಯ ಉಂಟಾಗಿರುವುದರಿಂದ ಸದರಿ ಸಂಶಯದ ಲಾಭವನ್ನು ಪಡೆದು ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು

ಅಭಿಪ್ರಾಯಪಟ್ಟು ಮೇಲ್ಕಾಣಿಸಿದ ಅಂಶ ಸಂಖ್ಯೆ 1 ರಿಂದ 3 ನ್ನು ನಕಾರಾತ್ಮಕ ಅಂತ ಉತ್ತರಿಸಿರುತ್ತೇನೆ.

28. <u>ಅಂಶ ಸಂಖ್ಯೆ **4** ಃ-</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, 1 ರಿಂದ 3 ಮತ್ತು 5 ನೇ ಆರೋಪಿತರನ್ನು ಅವರ ವಿರುದ್ಧ ಹೊರಿಸಿದ ಭಾ.ದಂ.ಸಂ.ಕಲಂ.498(ಎ), 504 ಮತ್ತು 506 ಸಹ ಕಲಂ.149 ರ ಅಡಿಯ ಆರೋಪಗಳು ಸಾಭೀತಾಗದ ಕಾರಣ ಆರೋಪಿತರನ್ನು ಖುಲಾಸೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತರು ಮತ್ತು ಅವರ ಜಾಮೀನುದಾರರು ದಂ.ಪ್ರ.ಸಂ. ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 12 ನೇ ಜೂನ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್ )
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ

<u>ಅನುಬಂಧ</u>

<u>ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-</u>

ಪ್ರಾ.ಸಾ.1- ಪ್ರಶಾಂತ ನಿಂಗಪ್ಪ ಚಲವಾದಿ

ಪ್ರಾ.ಸಾ.2- ನಿಜಪ್ಪ ಯಮನಪ್ಪ ಕಡಿಮನಿ

ಪ್ರಾ.ಸಾ.3- ಪ್ರಲ್ಹಾದ ಶಿವಪ್ಪ ಕರೆಣ್ಣನವರ

ಪ್ರಾ.ಸಾ.4- ವಿಕಾಶ ಪಾಂಡಪ್ಪ ಲಮಾಣಿ

ಪ್ರಾ.ಸಾ.5- ಶೋಭಾ ಸುನೀಲ ಹಳ್ಳಿ

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

ನಿ.ಪಿ.1 - ಸ್ಥಳ ಮಹಜರ

ನಿ.ಪಿ.2 - ಛಾಯಾ ಚಿತ್ರ

ನಿ.ಪಿ.3 - ಪ್ರಾಸಾ-3 ರವರ ಅಲ್ಲಗಳೆದ ಹೇಳಿಕೆ ಭಾಗ

ನಿ.ಪಿ.4- ದೂರು

ನಿ.ಪಿ.5- ಪ್ರಥಮ ವರ್ತಮಾನ ವರದಿ

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳು:-

--- ಇಲ್ಲ ---

ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

--- ಇಲ್ಲ ---

ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

--- ಇಲ್ಲ ---

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬಸವನ ಬಾಗೇವಾಡಿ